



## ಮಾದರಿ ಶೌಚಾಲಯ

ಮೈಸೂರಿನ ಗಾಂಧಿ ಚೌಕದ ಬಳಿ ಕಾಣುವ ಈ ಶೌಚಾಲಯವು ಫೈವ್ ಸ್ಟಾರ್ ಹೋಟೆಲ್‌ಗಳ ಶೌಚಾಲಯಗಳನ್ನು ಮೀರಿಸುವಂತಿದೆ. ಇದು ಮಾದರಿ ಶೌಚಾಲಯವೆಂದು ಗುರುತಿಸಿಕೊಂಡಿದೆ. ಇದು ಬರೀ ಶೌಚಾಲಯವಷ್ಟೇ ಅಲ್ಲ, ಇಲ್ಲಿ ಸ್ನಾನ ಗೃಹ, ಮಕ್ಕಳ ವಿಶೇಷ ಆರೈಕೆಯ ವ್ಯವಸ್ಥೆ, ವ್ಹೀಲ್ ಚೇರ್, ಆಲಂಕಾರಿಕ ಕೊಠಡಿ, ಬಿಸಿ ನೀರಿನ ಸೌಲಭ್ಯ ಹೀಗೆ ಅನೇಕ ಬಗೆಯ ಸೇವೆಗಳು ಲಭ್ಯ. ಸಾಕಷ್ಟು ವಿಶಾಲವಾದ ಜಾಗದಲ್ಲಿ ಮೈಸೂರಿನ ಕಟ್ಟಡಗಳ ಹೆಗ್ಗುರುತಾದ ಗೋಪುರ ಶೈಲಿಯಲ್ಲಿ ಇದನ್ನು ನಿರ್ಮಿಸಲಾಗಿದೆ. ಇಷ್ಟೇ ಅಲ್ಲದೆ ಸುತ್ತಮುತ್ತ ಗಿಡ ಮರಗಳನ್ನು ಬೆಳೆಸಲಾಗಿದ್ದು, ಪಾರ್ಕಿಂಗ್ ವ್ಯವಸ್ಥೆಯೂ ಇದೆ.

ಸುಮಾರು 4 ರಿಂದ 6 ಮಂದಿ ಸ್ತ್ರೀ ಮತ್ತು ಪುರುಷ ಮೈಸೂರು ಮಹಾನಗರ ಪಾಲಿಕೆ ಕೆಲಸಗಾರರು ತಮ್ಮ ತಮ್ಮ ಪಾಳಿಯ ಅನುಸಾರ ಶ್ರದ್ಧೆಯಿಂದ ಇಲ್ಲಿ ಕೆಲಸ ಮಾಡುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಇದನ್ನು ದಿನಪೂರ್ತಿ ಅತ್ಯಂತ ಆರೋಗ್ಯಕರ ವಾತಾವರಣ ಇರುವ ಹಾಗೆ ಎಚ್ಚರವಹಿಸಿ ನಿರ್ವಹಣೆ ಮಾಡುತ್ತಿದ್ದಾರೆ. ಮೈಸೂರು ಮಹಾನಗರ ಪಾಲಿಕೆಯು ನಗರದ ಅನೇಕ ಕಡೆ ಇದೇ ರೀತಿಯ ವಿನ್ಯಾಸ ಉಳ್ಳ ಕಟ್ಟಡಗಳನ್ನು ಸ್ಥಾಪಿಸಿರುವುದು ನಿಜಕ್ಕೂ ಶ್ಲಾಘನೀಯ. ಎಲ್ಲ ಕಡೆಯು ಇಂತಹ ಶೌಚಾಲಯಗಳನ್ನು ನಿರ್ಮಿಸಿದರೆ ಮತ್ತು ಇದೇ ರೀತಿ ನಿರ್ವಹಿಸಿದರೆ ಸಾರ್ವಜನಿಕ ಶೌಚಾಲಯಗಳ ಬಗ್ಗೆ ಯಾರೂ ಮೂಗು ಮುರಿಯುವುದಿಲ್ಲ.

–ಆರ್. ವೀರೇಶ್ ಕುಮಾರ್, ಬೆಂಗಳೂರು



## ನಕ್ಕಳಾ ರಾಜಕುಮಾರಿ

ಅರೆ, ಇದೇನಪ್ಪಾ... ಭರ್ಜರಿ ದಿರಿಸು ಧರಿಸಿ ಯಾವುದೋ ಲೋಕದ ಪುಟಾಣಿ ದೇವತೆ ನಿಂತಂತಿದೆ. ಉಡುಪಿಯಿಂದ 5 ಕಿ.ಮೀ. ದೂರದ ಪೆರಂಪಳ್ಳಿಯ ಟ್ರಿನಿಟಿ ಸೆಂಟ್ರಲ್ ಶಾಲೆಯ ವಾರ್ಷಿಕೋತ್ಸವದಂದು ನಡೆದ ಫ್ಯಾನ್ಸಿ ಡ್ರೆಸ್ ಸ್ಪರ್ಧೆಯಲ್ಲಿ ಯುಕೆಜಿ ವಿದ್ಯಾರ್ಥಿನಿ ಕುಮಾರಿ ರಾಜ್ವಿ ಕಂಗೊಳಿಸಿದ್ದು ಹೀಗೆ. ಬಾಲಕಿ ಧರಿಸಿದ ಗೌನ್ ಅವಳ ತಾಯಿ ಕೇವಲ ದಿನಪತ್ರಿಕೆಗಳನ್ನು ಉಪಯೋಗಿಸಿ ತಯಾರಿಸಿದ ಪೇಪರ್ ಗೌನ್ ಆಗಿತ್ತು. ನೆರೆದಿದ್ದವರ ಮೆಚ್ಚುಗೆಗೆ ಪಾತ್ರವಾಯಿತು. ಅಮ್ಮ ಮಗಳ ಈ ಪ್ರಯತ್ನ ಮೆಚ್ಚುವಂತಹದ್ದು.

–ಕೆ. ಲೀಲಾ ಶ್ರೀನಿವಾಸ್, ಹರಪನಹಳ್ಳಿ



## ಮಲಾಲಿ ಕಲ್ಲಂಗಡಿ

‘ಮಲಾಲಿ ಕಲ್ಲಂಗಡಿ’ಗಳೆಂದು ಕರೆಯಲ್ಪಡುವ ಈ ಹಣ್ಣುಗಳನ್ನು ಮಧ್ಯ ಇಸ್ರೇಲಿನಲ್ಲಿ ಹೇರಳವಾಗಿ ಬೆಳೆಯಲಾಗುತ್ತದೆ. ಮಧ್ಯ ಇಸ್ರೇಲಿನ ‘ಕ್ಫಾರ್ ಮಲಾಲಿ’ ಎಂಬ ಹಳ್ಳಿಯಲ್ಲಿ ಮೊಟ್ಟಮೊದಲು ಕಲ್ಲಂಗಡಿಯ ಈ ತಳಿಗಳನ್ನು ಬೆಳೆಸಲಾಗಿತ್ತು. ಆದ್ದರಿಂದ ಇವುಗಳಿಗೆ ಆ ಹಳ್ಳಿಯ ಹೆಸರು ಅಂಟಿಕೊಂಡಿದೆ.

ಸಂಶೋಧನೆಯ ಪ್ರಕಾರ ಮಲಾಲಿ ಕಲ್ಲಂಗಡಿಯು ಸ್ಥಳೀಯ ಮಹಾಸ್ನಿ ಮತ್ತು ಚಿಲೀನ್ ಬ್ಲ್ಯಾಕ್ ತಳಿಗಳ ಮಿಶ್ರ ತಳಿಯಾಗಿದೆ. ಸ್ವಾದಿಷ್ಟ ಬೀಜಗಳೇ ಈ ಹಣ್ಣಿನ ವಿಶೇಷ. ಹಣ್ಣಿನ ಮಾಂಸಲ ಭಾಗದ ಬದಲಾಗಿ ಬೀಜಗಳನ್ನು ಹೆಚ್ಚಾಗಿ ಸೇವಿಸಲಾಗುತ್ತದೆ. ಒಂದು ಕಾಲದಲ್ಲಿ ಬಂಜರು ಭೂಮಿಯಾಗಿದ್ದ ಇಸ್ರೇಲಿನ ಮಣ್ಣು ಇಂದು ಕಲ್ಲಂಗಡಿ ಹಣ್ಣಿನ ಸಮೃದ್ಧಿಯಿಂದ ತುಂಬಿ ತುಳುಕುತ್ತಿದೆ. ಸುಮಾರು 40 ಸಾವಿರ ಚದರ ಕಿ.ಮೀ.ಗಳ ವಿಸ್ತೀರ್ಣದಲ್ಲಿ ಇದನ್ನು ಬೆಳೆಸಲಾಗುತ್ತಿದೆ. ಇಸ್ರೇಲಿನ ಒಣ ಮತ್ತು ಉಷ್ಣ ಹವೆಯು ಸದ್ರಿ ಕಲ್ಲಂಗಡಿ ಬೆಳೆಗೆ ಸೂಕ್ತವಾಗಿದೆ. ಇಲ್ಲಿನ ಕೃಷಿಕರೂ ಕಲ್ಲಂಗಡಿ ಬೆಳೆಯುವಲ್ಲಿ ಅನುಭವಸ್ಥರಾಗಿದ್ದು, ಮಾಗಿದ ಹಣ್ಣುಗಳನ್ನು ಮೇಲ್ಮೈಯಿಂದಲೇ ಗುರುತಿಸುವಷ್ಟು ಪಕ್ವವಾಗಿದ್ದಾರೆ. ಇವು ಗಾತ್ರದಲ್ಲಿ ಕುಂಬಳಕಾಯಿಗಳನ್ನೂ ಮೀರಿಸುವಂತಿದ್ದು, ಬೀಜಗಳ ಸೇವನೆಗೆ ಯೂರೋಪಿನ ಇತರ ತಳಿಗಳಿಗಿಂತ ಅತಿ ಹೆಚ್ಚು ಪ್ರಶಸ್ತವೆಂದು ಪ್ರಚಲಿತವಿವೆ. ಮಲಾಲಿ ಕಲ್ಲಂಗಡಿಯು ಇಸ್ರೇಲಿನಲ್ಲಿ ಅತಿ ಹೆಚ್ಚಾಗಿ ಸೇವಿಸುವ ಹಣ್ಣುಗಳ ಪೈಕಿ ಇದು ಎರಡನೆಯ ಸ್ಥಾನದಲ್ಲಿದೆ..

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ